# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 449 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.07.2024 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; ಮತ್ತು ಅವು ಯಾವುವು; | ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ: 104.<br><br>ಗ್ರಾಮ ಪಂಚಾಯಿತಿವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಗ್ರಾಮ ಪಂಚಾಯಿತಿಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುತ್ತಿರುವ ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆ / ಕಾರ್ಯಕ್ರಮಗಳಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, 15ನೇ ಹಣಕಾಸು ಯೋಜನೆ, ಜಲಜೀವನ್ ಮಿಷನ್, ಸ್ವಚ್ಛ ಭಾರತ ಅಭಿಯಾನ (ಗ್ರಾಮೀಣ), ಗ್ರಾಮ ಪಂಚಾಯತಿ ಅಮೃತ ಆರೋಗ್ಯ ಅಭಿಯಾನ, ಕೂಸಿನ ಮನೆ ಇವುಗಳನ್ನು ಗ್ರಾಮ ಪಂಚಾಯತಿಗಳ ಮೂಲಕ ಜಾರಿಗೊಳಿಸಲಾಗಿದೆ. |
| (ಇ) | ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಹಣೆಯ ಬಗ್ಗೆ ವಿಸ್ತೃತವಾದ ವಿವರಣೆ ಜೊತೆಗೆ ಯೋಜನೆಗಳನ್ನು ಜನರಿಗೆ ತಲುಪಿಸುವ ಸಂಬಂಧ ಅನುದಾನವನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತ ದೆಂಬ ಬಗ್ಗೆ ಮಾಹಿತಿಯನ್ನು ನೀಡುವುದು; | ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆಗಳನ್ನು ಸಕಾಲದಲ್ಲಿ ನಾಗರೀಕರಿಗೆ ತಲುಪಿಸುವ ಉದ್ದೇಶದಿಂದ ಜನವಸತಿ ಸಭೆ, ವಾರ್ಡ್ ಸಭೆ, ಮತ್ತು ಗ್ರಾಮ ಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ಮತ್ತು ಅಭಿವೃದ್ಧಿ ಯೋಜನೆಗಳ ಬಗ್ಗೆ ಚರ್ಚಿಸಿ ಗ್ರಾಮ ಸಭೆಗಳಲ್ಲಿ ಸಾರ್ವಜನಿಕರು ನೀಡಿದ ಅರ್ಜಿಗಳಿಗೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಕ್ರಿಯಾ ಯೋಜನೆಯನ್ನು ಸರ್ಕಾರದ ಮಾರ್ಗ ಸೂಚಿಯಂತೆ ತಯಾರಿಸಿ, ಅನುಮೋದನೆ ಪಡೆದು ಅನುದಾನ ವಿನಿಯೋಗ ಮಾಡಲಾಗುತ್ತಿದೆ.<br><br>ಗ್ರಾಮ ಪಂಚಾಯಿತಿಗಳು ಕುಡಿಯುವ ನೀರು, ನೈರ್ಮಲ್ಯ ಕಾಮಗಾರಿ, ಸಾರ್ವಜನಿಕ ರಸ್ತೆ ನಿರ್ಮಾಣ, ನಿರ್ವಹಣೆ ಮತ್ತು ದುರಸ್ತಿ, ಬೀದಿ ದೀಪ ಮಳೆ ನೀರು ಕೊಯ್ಲು, ಮೂಲಭೂತ ಸೌಕರ್ಯ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು, ಸಾರ್ವಜನಿಕ ಕಟ್ಟಡಗಳ ದುರಸ್ಥಿ, ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಮತ್ತು ವಿದ್ಯುತ್ ಬಿಲ್ ಪಾವತಿ ಮುಂತಾದ ಉದ್ದೇಶಗಳಿಗೆ ವೆಚ್ಚ ಮಾಡಲು ಉಪಯೋಗಿಸಿಕೊಳ್ಳುತ್ತಿವೆ. |

| | | |
|---|---|---|
| (ಈ) | ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದಿಂದ ನೀಡಲಾಗುವ ಅನುದಾನ ಎಷ್ಟು; ಎಷ್ಟು ತಿಂಗಳಿಗೊಮ್ಮೆ ಸದರಿ ಪಂಚಾಯಿತಿಗಳಿಗೆ ಎಷ್ಟು ಮೊತ್ತದ ಅನುದಾನವನ್ನು ನೀಡಲಾಗುತ್ತದೆ; ರಾಜ್ಯ ಹಾಗೂ ಕೇಂದ್ರ ಸರ್ಕಾರದ ವತಿಯಿಂದ ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗುವುದೇ; ಹಾಗಿದ್ದಲ್ಲಿ, ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಅನುದಾನದ ವಿವರಗಳನ್ನು ಒದಗಿಸುವುದು? | ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ವಿವಿಧ ಯೋಜನೆ / ಕಾರ್ಯಕ್ರಮಗಳ ಮೂಲಕ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.<br><br>ಗ್ರಾಮ ಪಂಚಾಯತಿಗಳು ಆರ್ಥಿಕವಾಗಿ ಸಧೃಢವಾಗಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಣಕಾಸು ಆಯೋಗಗಳ ಶಿಫಾರಸ್ಸಿನ್ವಯ ಅನುದಾನ ನೀಡಲಾಗುತ್ತಿದೆ.<br><br>ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಗ್ರಾಮ ಪಂಚಾಯತಿಗಳಿಗೆ ವಾರ್ಷಿಕವಾಗಿ ಸರಾಸರಿ ಶಾಸನಬದ್ಧ ಅನುದಾನವಾಗಿ ರೂ:20.00 ಲಕ್ಷಗಳ ಅನುದಾನ ನೀಡಲಾಗುತ್ತಿದೆ.<br><br>ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿನ ಕಾರ್ಮಿಕ ಆಯವ್ಯಯ ಆಧರಿಸಿ ಅನುದಾನ ನೀಡಲಾಗುತ್ತಿದೆ.<br><br>ಕೇಂದ್ರ 15ನೇ ಹಣಕಾಸು ಆಯೋಗದ ಅನುದಾನವನ್ನು ಶೇ.90 ರಷ್ಟು ಜನಸಂಖ್ಯೆ ಮತ್ತು ಶೇ.10ರಷ್ಟು ಭೌಗೋಳಿಕ ಪ್ರದೇಶದ ಆಧಾರದ ಮೇಲೆ ಬಿಡುಗಡೆಗೊಳಿಸಲಾಗುತ್ತಿದ್ದು, ಪ್ರತಿ ಗ್ರಾಮ ಪಂಚಾಯತಿಗೆ ಸರಾಸರಿ ರೂ:15 ಲಕ್ಷಗಳ ಅನುದಾನ ನೀಡಲಾಗುತ್ತಿದೆ.<br><br>ಕೊಡಗು ಜಿಲ್ಲೆಯ ಗ್ರಾಮ ಪಂಚಾಯತಿಗಳಿಗೆ 15 ನೇ ಹಣಕಾಸು ಆಯೋಗದ ಅನುದಾನದಡಿ ಕೇಂದ್ರ ಸರ್ಕಾರದದಿಂದ ರೂ.1762.71 ಲಕ್ಷಗಳು ಬಿಡುಗಡೆಯಾಗಿರುತ್ತದೆ.<br><br>ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುದಾನದಡಿ ಕೇಂದ್ರ ಸರ್ಕಾರದದಿಂದ 851.76 ಲಕ್ಷಗಳು ಮತ್ತು ರಾಜ್ಯ ಸರ್ಕಾರದಿಂದ ರೂ. 94.64 ಲಕ್ಷಗಳು ಬಿಡುಗಡೆಯಾಗಿರುತ್ತದೆ.<br><br>ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ರೂ. 500.96 ಲಕ್ಷಗಳು, ವಿದ್ಯುಚ್ಛಕ್ತಿ ಬಿಲ್‌ಗಾಗಿ ರೂ. 547.07 ಲಕ್ಷಗಳು ಮತ್ತು ಗ್ರಂಥಾಲಯ ನೌಕರರ ವೇತನಕ್ಕಾಗಿ ರೂ. 114.10 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. |

ಸಂಖ್ಯೆ: ಗ್ರಾಅಪ 317 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಮಡಿಕೇರಿ | ಸೋಮವಾರಪೇಟೆ | ಕುಶಾಲನಗರ | ವಿರಾಜಪೇಟೆ | ಪೊನ್ನಂಪೇಟೆ |
|---|---|---|---|---|---|
| | ಗ್ರಾಮ ಪಂಚಾಯಿತಿ | | | | |
| 1 | ಅಯ್ಯಂಗೇರಿ | ಐಗೂರು | ನಲ್ಲಿಹುದಿಕೇರಿ | ಅಮ್ಮತ್ತಿ | ತಿತಿಮತಿ |
| 2 | ಬಲ್ಲಮಾವಟಿ | ಆಲೂರು ಸಿದ್ದಾಪುರ | ವಾಲ್ನೂರು ತ್ಯಾಗತ್ತೂರು | ಆರ್ಜಿ | ಮಾಯಮುಡಿ |
| 3 | ಬೆಂಗೂರು | ಬೇಳೂರು | ನಂಜರಾಯಪಟ್ಟಣ | ಬಿ.ಶೆಟ್ಟಿಗೇರಿ | ದೇವರಪುರ |
| 4 | ಬೆಟ್ಟಗೇರಿ | ಬೆಸ್ಸೂರು | ಗುಡ್ಡೆಹೊಸೂರು | ಬೇಟೋಳಿ | ಬಾಳೆಲೆ |
| 5 | ಭಾಗಮಂಡಲ | ಬೆಟ್ಟದಳ್ಳಿ | 7ನೇ ಹೊಸಕೋಟೆ | ಬಿಳುಗುಂದ | ನಿಟ್ಟೂರು |
| 6 | ಚೆಂಬು | ಬ್ಯಾಡಗೊಟ್ಟ | ಕೂಡಗರಳ್ಳಿ | ಬಿಟ್ಟಂಗಾಲ | ಪೊನ್ನಪ್ಪಸಂತೆ |
| 7 | ಎಮ್ಮೆಮಾಡು | ಚೌಡ್ಲು | ಕಂಬಿಬಾಣೆ | ಚೆಂಬೆಬೆಳ್ಳೂರು | ಕಾನೂರು |
| 8 | ಗಾಳಿಬೀಡು | ದೊಡ್ಡಮಳ್ತೆ | ನಾಕೂರು ಶಿರಂಗಾಲ | ಚೆನ್ನಯ್ಯನಕೋಟೆ | ಗೋಣಿಕೊಪ್ಪ |
| 9 | ಹಾಕತ್ತೂರು | ದುಂಡಳ್ಳಿ | ಕೂಡುಮಂಗಳೂರು | ಹಾಲುಗುಂದ | ಹಾತೂರು |
| 10 | ಹೊದ್ದೂರು | ಗಣಗೂರು | ಮುಳ್ಳುಸೋಗೆ | ಹೊಸೂರು | ಪೊನ್ನಂಪೇಟೆ |
| 11 | ಹೊಸ್ಕೇರಿ | ಗರ್ವಾಲೆ | ಕೊಡಿಗೆ | ಕದನೂರು | ಕಿರುಗೂರು |
| 12 | ಕಡಗದಾಳು | ಗೌಡಳ್ಳಿ | ಹೆಬ್ಬಾಲೆ | ಕಾಕೋಟುಪರಂಬು | ಬಲ್ಯಮಂಡೂರು |
| 13 | ಕೆ. ನಿಡುಗಣೆ | ಹಾನಗಲ್ಲು | ತೊರೆನೂರು | ಕಣ್ಣಂಗಾಲ | ಅರವತ್ತೊಕ್ಲು |
| 14 | ಕಾಂತೂರು ಮೂರ್ನಾಡು | ಹಂಡ್ಲಿ | ಶಿರಂಗಾಲ | ಕಾರ್ಮಾಡು | ಕುಟ್ಟ |
| 15 | ಕರಿಕೆ | ಹರದೂರು | ಸುಂಟಿಕೊಪ್ಪ | ಕೆದಮುಳ್ಳೂರು | ನಾಲ್ಕೇರಿ |
| 16 | ಕೊಣಂಜಗೇರಿ | ಕಿರಗಂದೂರು | ಚೆಟ್ಟಳ್ಳಿ | ಮಾಲ್ದಾರೆ | ಕೆ.ಬಾಡಗ |
| 17 | ಕುಂದಚೇರಿ | ಕೊಡ್ಲಿಪೇಟೆ | ಕೆದಕಲ್ | ಪಾಲಿಬೆಟ್ಟ | ಶ್ರೀಮಂಗಲ |
| 18 | ಕುಂಜಿಲ | ಮಾದಾಪುರ | | ಸಿದ್ದಾಪುರ | ಟಿ.ಶೆಟ್ಟಿಗೇರಿ |
| 19 | ಮದೆ | ನೇರುಗಳಲೆ | | | ಬಿರುನಾಣಿ |
| 20 | ಮಕ್ಕಂದೂರು | ನಿಡ್ತ | | | ಹುದಿಕೇರಿ |
| 21 | ಮರಗೋಡು | ಶನಿವಾರಸಂತೆ | | | |
| 22 | ಮೇಕೇರಿ | ಶಾಂತಳ್ಳಿ | | | |
| 23 | ನಾಪೋಕ್ಲು | ತೊಳೂರು ಶೆಟ್ಟಳ್ಳಿ | | | |
| 24 | ನರಿಯಂದಡ | | | | |
| 25 | ಪೆರಾಜೆ | | | | |
| 26 | ಸಂಪಾಜೆ | | | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪರವಾಗಿ,
ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ